# ಮತ್ತೆ ಶಾರುಖ್–ಸಲ್ಮಾನ್ ಒಟ್ಟಿಗೆ?

■ ವಿಶಾಖ ಎನ್.





'ಕರಣ್ ಅರ್ಜುನ್' ಸಿನಿಮಾ ತೆರೆಕಂಡು ದಶಕಗಳೇ ಆಗಿವೆ. ಅದರಲ್ಲಿ ಶಾರುಖ್ ಹಾಗೂ ಸಲ್ಮಾನ್ ಖಾನ್‌ದ್ವಯರು ಅಭಿಮಾನಿಗಳನ್ನು ಎಳೆದುಹಾಕಿದ್ದರು. ಮತ್ತೊಮ್ಮೆ ಈ ಇಬ್ಬರನ್ನೂ ನೋಡುವ ಅವಕಾಶ ಪ್ರೇಕ್ಷಕರಿಗೆ ಸಿಗಲಿದೆ ಎನ್ನುವ ಗುಸುಗುಸು ಈಗ ರೆಕ್ಕೆಪುಕ್ಕ ಪಡೆದುಕೊಂಡಿದೆ. 1995ರಲ್ಲಿ ರಾಕೇಶ್ ರೋಷನ್ ನಿರ್ಮಿಸಿ, ನಿರ್ದೇಶಿಸಿದ್ದ 'ಕರಣ್ ಅರ್ಜುನ್' ಬಂಡವಾಳದ ಹತ್ತು ಪಟ್ಟು ಲಾಭವನ್ನು ತಂದುಕೊಟ್ಟಿತ್ತು. ಬರೀ ಆರು ಕೋಟಿ ರೂಪಾಯಿ ವೆಚ್ಚದಲ್ಲಿ ತಯಾರಾಗಿದ್ದ ಚಿತ್ರ ಅದು.

ಯಶ್ ರಾಜ್ ಫಿಲ್ಮ್ಸ್ ಬ್ಯಾನರ್‌ನಲ್ಲಿ 'ಪಠಾಣ್' ಸಿನಿಮಾ ಚಿತ್ರೀಕರಣ ಹೋದವರ್ಷ ನವೆಂಬರ್‌ನಲ್ಲಿ ಶುರುವಾಗಿದೆ. ಶಾರುಖ್ ಹಾಗೂ ದೀಪಿಕಾ ತಂತಮ್ಮ ಕೆಲವು ದೃಶ್ಯಗಳ ಚಿತ್ರೀಕರಣವನ್ನು ಈಗಾಗಲೇ ಮುಗಿಸಿರುವ ಸುದ್ದಿ ಇದೆ. ಸಿದ್ಧಾರ್ಥ್ ಆನಂದ್ ನಿರ್ದೇಶನದ ಈ ಚಿತ್ರದಲ್ಲಿ ಜಾನ್ ಅಬ್ರಹಾಂ ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಾರೆ ಎನ್ನಲಾಗಿತ್ತು. ಈಗ ಚಿಕ್ಕ ಪಾತ್ರವೊಂದರಲ್ಲಿ ಸಲ್ಮಾನ್ ನಟಿಸಲು ಒಪ್ಪಿದ್ದಾರೆ ಎಂಬ ಮಾತಿದೆ. ಆದರೆ, ಚಿತ್ರತಂಡದ ಯಾರೊಬ್ಬರೂ ಇದನ್ನು ಸ್ಪಷ್ಟಪಡಿಸದೆ ಗುಟ್ಟಾಗಿಯೇ ಇಟ್ಟಿದ್ದಾರೆ.

ಟೈಗರ್ ಹೆಸರಿನ ಪಾತ್ರದಲ್ಲೇ ಈ ಸಿನಿಮಾದಲ್ಲೂ ಸಲ್ಮಾನ್ ಕಾಣಿಸಿಕೊಂಡು ಅಗತ್ಯ ಪ್ರಚಾರಕ್ಕೆ ಅನುಕೂಲ ಮಾಡಿಕೊಡಲಿದ್ದಾರೆ. ಹನ್ನೆರಡರಿಂದ ಹದಿನಾಲ್ಕು ದಿನಗಳ ಚಿತ್ರೀಕರಣದಲ್ಲಿ ಅವರು ತೊಡಗುವರು ಎನ್ನಲಾಗಿದೆ. 'ಓಂ ಶಾಂತಿ ಓಂ', 'ಚೆನ್ನೈ ಎಕ್ಸ್‌ಪ್ರೆಸ್', 'ಹ್ಯಾಪಿ ನ್ಯೂ ಇಯರ್' ಈ ಮೂರು ಚಿತ್ರಗಳಲ್ಲಿ ಶಾರುಖ್ ಹಾಗೂ ದೀಪಿಕಾ ಜೋಡಿ ಅಭಿನಯಿಸಿತ್ತು. ಮೂರೂ ಗಲ್ಲಾಪೆಟ್ಟಿಗೆಯಲ್ಲಿ ದೊಡ್ಡ ಮಟ್ಟದ ಯಶಸ್ಸು ಸಾಧಿಸಿದ್ದವು. 2018ರಲ್ಲಿ ಆನಂದ್ ಎಲ್. ರೈ ನಿರ್ದೇಶನದ 'ಝೀರೊ'ದಲ್ಲಿ ಕಾಣಿಸಿಕೊಂಡ ಮೇಲೆ ಶಾರುಖ್ ಅಭಿನಯದ ಯಾವ ಸಿನಿಮಾ ಕೂಡ ತೆರೆಕಂಡಿಲ್ಲ. ಸಲ್ಮಾನ್ ಸಹ ದೊಡ್ಡ ಹಿಟ್‌ಗಾಗಿ ಎದುರು ನೋಡುತ್ತಿದ್ದಾರೆ. 'ಬದ್ಲಾ', 'ಕಾಮಿಯಾಬ್' ತರಹದ ಚಿತ್ರಗಳ ಮೇಲೆ ಬಂಡವಾಳ ಹೂಡಿದ್ದ ಶಾರುಖ್ 'ಪಠಾಣ್' ಆಗಿ ಎಷ್ಟರಮಟ್ಟಿಗೆ ಮೋಡಿ ಮಾಡಲಿದ್ದಾರೆ ಎನ್ನುವುದನ್ನು ನೋಡಬೇಕಿದೆ. ■

# ಆಲಿಯಾಗೆ ಶುಭಾಶಯಗಳ ಮಹಾಪೂರ

ಆಲಿಯಾ ಭಟ್ ಹಾಗೂ ಸಂಜಯ್ ಲೀಲಾ ಬನ್ಸಾಲಿ ಮೊದಲ ಬಾರಿಗೆ ಒಟ್ಟಾಗಿ ಸೇರಿ ಕೆಲಸ ಮಾಡುತ್ತಿರುವ 'ಗಂಗೂಬಾಯಿ ಕಾಥಿಯಾವಾಡಿ' ಚಿತ್ರದ ಟೀಸರ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಅಕ್ಷಯ್‌ಕುಮಾರ್, ಪ್ರಿಯಾಂಕಾ ಚೋಪ್ರಾ, ವರುಣ್ ಧವನ್, ದಿಯಾ ಮಿರ್ಜಾ ಎಲ್ಲರೂ ಟೀಸರ್ ನೋಡಿಯೇ ಆಲಿಯಾಗೆ ಮೆಚ್ಚುಗೆಯ ಸುರಿಮಳೆಗರೆದಿದ್ದಾರೆ.

'ಅಮಾವಾಸ್ಯೆಯ ರಾತ್ರಿ ಇಲ್ಲಿ ಆಗುವುದೇ ಇಲ್ಲ... ಯಾಕೆಂದರೆ, ಗಂಗೂಬಾಯಿ ಹವೇಲಿ ಇದು' ಎನ್ನುವ ಬಿಲ್ಡಪ್ ಸಾಲಿನೊಂದಿಗೆ ಶುರುವಾಗುವ ಟೀಸರ್ ತುಂಬಾ ಆಲಿಯಾ ಭಾವಾಭಿನಯದ ನಮೂನೆಗಳಿವೆ. ಮಂಚದ ಫ್ರೇಮಿನ ಮೇಲೆ ಕಾಲುಗಳನ್ನು ಇಳಿಬಿಟ್ಟು, ಬಾಯೊಳಗೆ ಬೀಡಿ ಇಟ್ಟು ಹಚ್ಚಿ ಕಣ್ಣು ಸಣ್ಣಗೆ ಮಾಡಿಕೊಂಡು ಆಲಿಯಾ ಡೈಲಾಗ್ ಹೊಡೆಯುವ ಪರಿಯನ್ನು ನೋಡಿ ಪ್ರಿಯಾಂಕಾ ಚೋಪ್ರಾ ಫಿದಾ ಆಗಿದ್ದಾರೆ. 'ಪಾತ್ರದ ಪರಕಾಯ ಪ್ರವೇಶ ಮಾಡಿರುವ ನಿನ್ನ ಧೈರ್ಯಕ್ಕೆ ಮೆಚ್ಚಬೇಕು. ಇಂಥ ಪಾತ್ರವನ್ನು ಎಲ್ಲರೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಸ್ನೇಹಿತೆ, ನಿನಗೆ ಶುಭವಾಗಲಿ' ಎಂದು ಪ್ರಿಯಾಂಕಾ ಗೆಳತಿಗೆ ಹಾರೈಕೆಯ ಸಂದೇಶ ಬರೆದಿದ್ದಾರೆ. ಟ್ವಿಟರ್‌ನಲ್ಲಿ ಟೀಸರ್ ಕುರಿತು ಬಂದಿರುವ ಕೆಲವು ಪ್ರತಿಕ್ರಿಯೆಗಳನ್ನು ಆಲಿಯಾ ಹಂಚಿಕೊಂಡಿದ್ದಾರೆ.

ಹಲವು ಭಾವಪದರಗಳನ್ನು ಒಳಗೊಂಡ ಪಾತ್ರದ ರೂಹು ಅರಿತುಕೊಳ್ಳಲು ಆಲಿಯಾ ಸಾಕಷ್ಟು ತಯಾರಿ ನಡೆಸಿದ್ದಾರೆ. ಹೋಂವರ್ಕ್ ಮಾಡಿಸಿದ್ದಷ್ಟೇ ಅಲ್ಲ, ಸಂಜಯ್ ಲೀಲಾ ಬನ್ಸಾಲಿ ಅವರನ್ನು ಹಲವು ಬಗೆಯ ತರಬೇತಿಗೆ ಒಳಪಡಿಸಿದ್ದಾರೆ. ನಟಿಯಾಗಿ ಅವರ ವೃತ್ತಿಬದುಕಿನಲ್ಲಿ ಈ ಚಿತ್ರ ದೊಡ್ಡ ಜಿಗಿತವಾಗಲಿದೆ ಎಂದೂ ಕೆಲವರು ಈಗಾಗಲೇ ಹೊಗಳುತ್ತಿದ್ದಾರೆ. ಒಂದೂವರೆ ನಿಮಿಷದ ಟೀಸರ್‌ಗೇ ಇಷ್ಟೊಂದು ಪ್ರತಿಕ್ರಿಯೆ ಹರಿದುಬಂದಿರುವುದು ತಮ್ಮ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ ಎಂದು ಆಲಿಯಾ ಹೇಳಿದ್ದಾರೆ. ■

